ಸದನದಲ್ಲಿ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, ದಿನಾಂಕ: 16ನೇ ಮಾರ್ಚ್, 2020

ಏಪ್ರಾನ್ ಖರೀದಿಯಲ್ಲಿ ಅವ್ಯವಹಾರದ ಬಗ್ಗೆ

ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

144 (1046) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ಸಕಾಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅಕ್ಷರ ದಾಸೋಹ ಯೋಜನೆಯ ಅಗ್ನಿನಂದಕ (ಫೈಯರ್ ಪ್ರೂಫ್) ಏಪ್ರಾನ್ ಖರೀದಿ ಅವ್ಯವಹಾರದಲ್ಲಿ ಅಧಿಕಾರಿಗಳು ಶಾಮೀಲಾಗಿರುತ್ತಾರೆಯೆಂದು ಬೆಳಕಿಗೆ ಬಂದಿದ್ದು, ಇದರಲ್ಲಿ ಉನ್ನತ ಹುದ್ದೆ ಅಲಂಕರಿಸಿದ ಅಧಿಕಾರಿಯೊಬ್ಬರು ತಮ್ಮದೇ ಏಜೆನ್ಸಿಯೊಂದರ ಮೂಲಕ ಈ ಅವ್ಯವಹಾರ ನಡೆಸಿದ್ದು, ಈಗ ಜಿಲ್ಲಾ ಪಂಚಾಯತ್ ಅಧಿಕಾರಿಗಳು ತಾವೇ ಏಜೆನ್ಸಿಗಳನ್ನು ನಿಗದಿಪಡಿಸಿ ಶಿಕ್ಷಣ ಇಲಾಖೆಗೆ ನಿರ್ದೇಶನ ನೀಡಿ ಸಿ.ಆರ್.ಪಿ. ಗಳ ಮೂಲಕ ಶಾಲೆಗಳಿಗೆ ಏಪ್ರಾನ್ ವಿತರಿಸಿ ಏಜೆನ್ಸಿಗಳಿಗೆ ಚೆಕ್ ನೀಡುವಂತೆ ಶಿಕ್ಷಕರಿಗೆ ಬಲವಂತ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)

(ಆ) ಮಾರುಕಟ್ಟೆ ದರಕ್ಕಿಂತ ದುಪ್ಪಟ್ಟು ದರದಲ್ಲಿ ಪೂರೈಸಲಾದ ಏಪ್ರಾನ್ ಕಳಪೆ ಮಟ್ಟದಾಗಿರುವುದರಿಂದ ಅವ್ಯವಹಾರದ ಆರೋಪ ವ್ಯಕ್ತವಾಗಿರುವುದರಿಂದ ಪೂರೈಸುವ ಪೂರ್ವದಲ್ಲಿ ಈ ಕುರಿತು ಟೆಂಡರ್ ಕರೆದಿರುವ ವಿವರ, ಟೆಂಡರ್ ಹಾಕಿರುವವರ ವಿವರ ಪೂರೈಕೆದಾರರು ದರದ ಪ್ರಕಾರ ಪೂರೈಸಿದ ವಿವರ, ನೀಡುವುದು ; (ಕಾರವಾರ ಶೈಕ್ಷಣಿಕ ಜಿಲ್ಲೆಯ 5 ತಾಲ್ಲೂಕುಗಳ ವಿವರ ನೀಡುವುದು)

(ಇ) ಏಪ್ರಾನ್ ಖರೀದಿ ದೊಡ್ಡ ಪ್ರಮಾಣದ ಅವ್ಯವಹಾರ ಆಗಿರುತ್ತದೆಯೆಂದು ಹಾಗೂ ಕಳಪೆ ಮಟ್ಟದ ಏಪ್ರಾನ್ ಪೂರೈಸಿರುತ್ತಾರೆಂದು ಸ್ಥಳೀಯ ಗ್ಯಾಸ್ ಏಜೆನ್ಸಿಯವರು ನೋಡಿ ದೃಢಪಡಿಸಿದ್ದರೂ ಸಂಬಂಧಿಸಿದ ಶಿಕ್ಷಣ ಇಲಾಖೆಯ ಅಧಿಕಾರಿಯ ಒತ್ತಡದಿಂದ ವಿತರಿಸಿದ ಏಪ್ರಾನ್ ಏಜೆನ್ಸಿರವರಿಗೆ ಶಿಕ್ಷಕರ ಮೂಲಕ ಚೆಕ್ ನೀಡಿರುವುದು ಬೆಳಕಿಗೆ ಬಂದಿರುವುದರಿಂದ ಸದರಿ ವಿಷಯದಲ್ಲಿ ಉನ್ನತ ಅಧಿಕಾರಿಗಳಿಂದ ಸರ್ಕಾರ ತನಿಖೆ ನಡೆಸುವುದೇ ? (ವಿವರ ನೀಡುವುದು)